ನವಿಲುಗರಿ

# ತ್ರಿಮೂರ್ತಿಗಳ ಅಪೂರ್ವ ದಾಖಲೆ



**ಜಿ.ವಿ. ಅರುಣ**

ಪ್ರೊ. ಎ.ಎನ್. ಮೂರ್ತಿರಾವ್, ನಿಟ್ಟೂರು ಶ್ರೀನಿವಾಸರಾವ್ ಹಾಗೂ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಒಟ್ಟಿಗೆ ಕಾರ್ಯ ನಿರ್ವಹಿಸಿದ ಕಾಲ ಕನ್ನಡ ಸಾಹಿತ್ಯ ಪರಿಷತ್ತಿನ ಚರಿತ್ರೆಯಲ್ಲಿ ಬಹುಮೂಲ್ಯವಾದುದು. ಶತಾಯುಷಿಗಳಾದ ತ್ರಿಮೂರ್ತಿಗಳ ಆಡಳಿತ ಕಾಲದ ನೆನಪುಗಳ ಈ ಟಿಪ್ಪಣಿ, ಪರಿಷತ್ತಿನ ಸ್ವರೂಪ ಹೇಗಿರಬೇಕು ಎನ್ನುವುದನ್ನು ಹೇಳುವಂತಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತವನ್ನು 1954-56ರ ಅವಧಿಯಲ್ಲಿ ಮೂವರು ಮಹನೀಯರು ಕೈಜೋಡಿಸಿ ಮುನ್ನಡೆಸಿದ್ದರು. ಅದಕ್ಕೆ ಕಾರಣ, ಅಂದಿನ ಹಿರಿಯ ಸಾಹಿತಿಗಳು ಮಾಡಿದ ಒಂದು ವಿಶೇಷ ವ್ಯವಸ್ಥೆ. ಅದು ಮುಂದೆ ಈ ತ್ರಿಮೂರ್ತಿಗಳು ಒಂದು ಅಪೂರ್ವ ದಾಖಲೆಯನ್ನು ನಿರ್ಮಿಸಲು ಕಾರಣವಾಯಿತು.

ಆ ಮೂವರು ಕನ್ನಡನಾಡು ಚೆನ್ನಾಗಿ ಬಲ್ಲ ಪ್ರೊ. ಎ.ಎನ್. ಮೂರ್ತಿರಾವ್ (1900-2003), ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾವ್ (1903-2004) ಹಾಗೂ ಪ್ರೊ. ಜಿ. ವೆಂಕಟಸುಬ್ಬಯ್ಯ (1913-2021) ಅವರುಗಳು. ಅವರು ನಿರ್ಮಿಸಿದ ದಾಖಲೆ ಎಂದರೆ, ಅವರೆಲ್ಲರೂ ಶತಾಯುಷಿಗಳಾಗಿ ಕನ್ನಡದ ಜನಮಾನಸದಲ್ಲಿ ನೆಲೆಸಿದವರು. ಆಗ ಆ ಮೂವರು ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತವನ್ನು ನಡೆಸಲು ಒಟ್ಟಿಗೆ ಸೇರಲು ಕಾರಣವಾದ ವಿಶೇಷ ವ್ಯವಸ್ಥೆಯು ಈಗ ಯಾರ ಗಮನಕ್ಕೂ ಬಾರದಂತೆ ಚರಿತ್ರೆಯ ಪುಟಗಳಲ್ಲಿ ಅಡಗಿಹೋಗಿದೆ.

1954ರ ಪೂರ್ವಭಾಗದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಎಂ.ಆರ್. ಶ್ರೀನಿವಾಸಮೂರ್ತಿಯವರು ಅವಧಿ ಮುಗಿಯುವ ಮೊದಲೇ ಅನಿರೀಕ್ಷಿತವಾಗಿ ನಿಧನರಾದಾಗ, ಉಳಿದ ಅವಧಿಗೆ ಸಮಿತಿಯಲ್ಲಿದ್ದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಅಧ್ಯಕ್ಷರಾದರು. ಆ ವರ್ಷದ ಮೇ ತಿಂಗಳಿನಲ್ಲಿ ಪರಿಷತ್ತಿನ ಅಧ್ಯಕ್ಷ ಪದವಿಯಿಂದ